**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ269/2011</u> ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **01.02.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟಿ ಸವಾಲುಃ** ವಾದಿ ಪರ ಶ್ರೀ ಜೆ.ಎಂ.ಎ ವಕೀಲರಿಂದಃ</u>

1 ನೇ ವಾದಿ ನನ್ನ ಸಹೋದರಿ ಎಂದರೆ ಸರಿ. ನಾನು, ವಾದಿ, 2, 3 ಮತ್ತು 4 ರಿಂದ 6 ಹಾಗೂ 3(ಎ) ಪ್ರತಿವಾದಿಯ ಗಂಡ, ಚಿಕ್ಕಸಿದ್ದಯ್ಯರವರ ಮಕ್ಕಳು ಎಂದರೆ ಸರಿ. ನಾನು ಬಿ.ಎ ಪದವೀದರನಾಗಿರುತ್ತೇನೆ. ನಾನು ಕರ್ನಾಟಕ ರಾಜ್ಯದ ವಿಧಾನಪರಿಷತ್ತಿನ ಸದಸ್ಯನಾಗಿದ್ದೆ ಎಂದರೆ ಸರಿ. ದಾಖಲೆಗಳನ್ನು ಪರಿಶೀಲಿಸಿದ್ದಾಗ ಅದರ ವಿವರಣೆ ತಿಳಿಯಲು ಆಗುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಸಾದ್ಯವಾದಷ್ಟು ತಿಳಿದುಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಮಕ್ಕಳ ಪೈಕಿ ನಾನು ಹಿರಿಯ ಮಗ ಎಂದರೆ ಸರಿ. ನನ್ನ ತಂದೆ ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆ 2000 ಇಸ್ವೀಯಲ್ಲಿ ತೀರಿಕೊಳ್ಳುವ ಸಮಯದಲ್ಲಿ ಅವರಿಗೆ ಅಂದಾಜು ಸುಮಾರು 70 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸದರಿಯವರು ತಮ್ಮ ಜೀವಿತಾವಧಿಯಲ್ಲಿ ಗಾರೆ ಕೆಲಸ ಮಾಡುತ್ತಿದ್ದರು. ಸದರಿಯವರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ಅವರೊಂದಿಗೆ ಸೇರಿಕೊಂಡು ವ್ಯವಸಾಯ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಎಷ್ಟು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದರು ಎನ್ನುವುದನ್ನು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ನನ್ನ ತಂದೆಯವರು ತಿ.ನರಸೀಪುರದ ಗೋಪಾಲಪುರದ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದರು. ನನ್ನ ತಂದೆಗೆ ಸದರಿ ಮನೆ ಹೇಗೆ ಬಂದಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ.

ದಾವಾ-1 ನೇ ಆಸ್ತಿಯಲ್ಲಿ ನಾನು ನನ್ನ ತಂದೆಯೊಂದಿಗೆ ವ್ಯವಸಾಯ ಮಾಡುತ್ತಿದ್ದೆನು ಎಂದರೆ ಸರಿ. ಸದರಿ ಆಸ್ತಿಯನ್ನು ಹೊರತುಪಡಿಸಿ ನನ್ನ ತಂದೆಯವರು ಬೇರೆ ಜಮೀನಿನಲ್ಲಿ ಯಾವುದೇ ವ್ಯವಸಾಯ ಮಾಡಿರುವುದಿಲ್ಲ, ಸಾಕ್ಷಿ ಮುಂದುವರಿದು ನನ್ನ ತಂದೆಯವರು ಮಲಿಯೂರು ಗ್ರಾಮದಲ್ಲಿದ್ದ ಜಮೀನಿನಲ್ಲಿ ವ್ಯವಸಾಯವನ್ನು ಮಾಡುತ್ತಿದ್ದು, ಸದರಿ

ಜಮೀನಿನನ್ನು ಅವರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1 ದಾಖಲೆಯ ಪ್ರಕಾರ ದಾವಾ-1 ನೇ ಆಸ್ತಿಯನ್ನು ನನ್ನ ತಂದೆ ಚಿಕ್ಕಸಿದ್ದಯ್ಯರವರ ಹೆಸರಿಗೆ ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ನನ್ನ ತಂದೆಯ ಜೊತೆಗೆ ವ್ಯವಸಾಯ ಮಾಡುತ್ತಿದ್ದೆನು ಎಂದು ಹೇಳಿ ಸದರಿ ಜಮೀನು ನನಗೆ ವೈಯುಕ್ತಿಕವಾಗಿ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-1 ಮಂಜೂರಾತಿ ಪತ್ರ ರದ್ದು ಆಗಿರುತ್ತದೆ. ಸದರಿ ಮಂಜೂರಾತಿ ಪತ್ರ 1998 ರಲ್ಲಿ ರದ್ದಾಗಿರಬಹುದು, ಸಾಕ್ಷಿ ಮುಂದುವರಿದು ಸದರಿ ಆಸ್ತಿ ನನ್ನ ಹೆಸರಿನಲ್ಲಿ ಮಂಜೂರಾದ ಕಾರಣ ಅದು ರದ್ದಾಗಿರುತ್ತದೆ ಎನ್ನುವ ನನ್ನ ಅಭಿಪ್ರಾಯ.

ನಾನು ಸಲ್ಲಿಸಿರುವ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳಿಗೆ ಸಂಬಂಧಿಸಿದಂತೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವಾ-1 ನೇ ಆಸ್ತಿಯು ನನ್ನ ತಂದೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಮಂಜೂರಾದ ಜಮೀನು ಎಂದರೆ ಸಾಕ್ಷಿ ಸದರಿ ಜಮೀನು ನನಗೆ ವೈಯುಕ್ತಿಕವಾಗಿ ಮಂಜೂರಾದ ಆಸ್ತಿ ಎಂದು ನುಡಿಯುತ್ತಾರೆ. ದಾವಾ-1 ನೇ ಆಸ್ತಿ ಮಂಜೂರುವಾಗುವ ಸಮಯದಲ್ಲಿ ನಾವು ಒಟ್ಟು ಕುಟುಬಂದಲ್ಲಿ ವಾಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆ ದಾವಾ-1 ನೇ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದ ದಿನದಿಂದಲೂ ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ಆಸ್ತಿಯಾಗಿ ವ್ಯವಸಾಯ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸಾಕ್ಷಿ ನನಗೆ ಮಂಜೂರಾದ ನಂತರ ನಾನು ವೈಯುಕ್ತಿಕವಾಗಿ ಮಾಡಿಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿಗೆ ಮಂಜೂರಾಗಿದ್ದ ಆಸ್ತಿ ರದ್ದಾದ ವಿಷಯ ಹಾಗೂ ನನ್ನ ಹೆಸರಿಗೆ ದಾವಾ-1 ನೇ ಆಸ್ತಿ ಮಂಜೂರಾದ ವಿಷಯ ನನಗೆ 1998 ರಲ್ಲಿ ತಿಳಿದಿರುತ್ತದೆ. ನನ್ನ ತಂದೆಯ ಹೆಸರಿಗೆ ಮಂಜೂರಾದ ದಾವಾ-1 ನೇ ಆಸ್ತಿಯು ರದ್ದಾಗಿರುವುದಿಲ್ಲ ಮತ್ತು ನನ್ನ ಹೆಸರಿಗೆ ಮಂಜೂರಾಗಿರುವುದಿಲ್ಲ ಹಾಗೂ ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಗತಿಯ ಬಗ್ಗೆ ನಾನು ದಾಖಲೆಗಳನ್ನು ಪರಿಶೀಲಿನೆ ಮಾಡಿರುತ್ತೇನೆ. ನನ್ನ ಹೆಸರಿಗೆ ದಾವಾ-1 ನೇ ಆಸ್ತಿ ಮಂಜುರಾದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ

ಸರಿಯಲ್ಲ. ಸದರಿ ಸಂಗತಿಯನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಸದರಿ ಸಂಗತಿಯನ್ನು ನಾನು ನ್ಯಾಯಾಲಯದಲ್ಲಿ ಪ್ರಪ್ರಥಮ ಬಾರಿಗೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ-2 ನೇ ಆಸ್ತಿಯಲ್ಲಿ ನನ್ನ ತಂದೆಯವರು ಯಾವಾಗಿನಿಂದ ವ್ಯವಸಾಯ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ಸದರಿ ಜಮೀನನ್ನು ಸರ್ಕಾರದವರು ನನ್ನ ತಮ್ಮನಿಗೆ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪರಿಶೀಲಿನೆ ಮಾಡಿರುವುದಿಲ್ಲ. ಸದರಿ ಸಂಗತಿ ನನ್ನ ತಮ್ಮ ಅಂದರೆ 5 ನೇ ಪ್ರತಿವಾದಿಯು ತಮಗೆ ಮಂಜುರಾಗಿರುತ್ತದೆ ಎಂಬ ವಿಷಯವನ್ನು ತಿಳಿಸಿದ್ದು, ಆಗ ನನಗೆ ಸದರಿ ವಿಚಾರ ತಿಳಿದಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ 5 ನೇ ಪ್ರತಿವಾದಿಯವರು ತಮ್ಮ ಅರ್ಜಿಯಲ್ಲಿ ಏನು ನಮೂದಿಸಿದ್ದರು ಎಂದು ಹಾಗೂ ಯಾವ ಆಧಾರದ ಮೇರೆಗೆ ಆದೇಶವಾಗಿರುತ್ತದೆ ಎನ್ನುವ ವಿಚಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ದಾವಾ-1 ರಿಂದ 3 ನೇ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಯಂತೆ ವ್ಯವಸಾಯ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸಾಕ್ಷಿಯು ದಾವಾ-1 ನೇ ಆಸ್ತಿಯಲ್ಲಿ ಮಾತ್ರ ವ್ಯವಸಾಯ ಮಾಡಿರುತ್ತೇನೆ, ಆದರೆ ದಾವಾ-2 ಮತ್ತು 3 ಆಸ್ತಿಗೆ ಸಂಬಂಧಿಸಿದಂತೆ ನಾನು ವ್ಯವಸಾಯ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ನಮ್ಮ ಒಟ್ಟು ಕುಟುಂಬದ ಆಸ್ತಿಯಂತೆ ವಿಭಾಗವಾಗಿರುತ್ತವೆ ಎಂದರೆ ಸಾಕ್ಷಿಯು ದಾವಾ-1 ನೇ ಆಸ್ತಿ ಮಾತ್ರ ವಿಭಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಾಲುವಿಭಾಗ ಪತ್ರ ನೋಂದಣಿ ಆಗಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಲ್ಲಿ ದಾವಾ-3 ನೇ ಆಸ್ತಿಯನ್ನು ನನ್ನ ತಂದೆಯವರಿಗೆ ನೀಡಲಾಗಿತ್ತು ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಪಾಲು ವಿಭಾಗದಲ್ಲಿ ಬಂದಂತೇ ಸದರಿ ಆಸ್ತಿಗಳು ಅವರ ಅವರ ಸ್ವಂತ ಆಸ್ತಿಗಳು ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ದಾವಾ-3 ನೇ ಆಸ್ತಿಯು ನನ್ನ ತಂದೆಯ ಹೆಸರಿಗೆ ವಿಭಾಗದಲ್ಲಿ ಬಂದಿರುತ್ತದೆ ಎಂದು ಹೇಳಿದಂತೆ ಸದರಿ ವಿಭಾಗದ ನಂತರ ಸದರಿ

ಆಸ್ತಿಯನ್ನು ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು 2 ಪ್ರತ್ಯೇಕ ಕ್ರಯ ಪತ್ರಗಳ ಮುಖಾಂತರ ಮಾರಾಟ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ವಾದಿಯವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಕ್ರಯ ಪತ್ರಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಕ್ರಯಪತ್ರಗಳನ್ನು ನಾನು ಪರಿಶೀಲಿನೆ ಮಾಡಿರುವುದಿಲ್ಲ. ಸದರಿ ಕ್ರಯ ಪತ್ರಕ್ಕೆ ನನ್ನ ತಂದೆ ಅಲ್ಲದೇ ನಾವು 3 ಜನ ಗಂಡು ಮಕ್ಕಳು ಸಹಿ ಮಾಡಿರುತ್ತೇವೆ ಎಂದರೆ ಸರಿ. ನಾನು ಹೇಳಿದಂತೆ ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗದ ಕಾರಣ ನಾವು ಹೇಳಿದಂತೆ ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಬೇರೆಯವರು ತಕರಾರು ಮಾಡಬಾರದೆಂದು ನನ್ನ ತಂದೆಯವರು ನಮ್ಮಗಳ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯ ಬಗ್ಗೆ ಕ್ರಯ ಪತ್ರದಲ್ಲಿ ಬರವಣಿಗೆ ಇರುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಕ್ರಯ ಪತ್ರವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ವಿಭಾಗವಾದ ಬಾಬ್ತು ದಾವಾ-1 ನೇ ಆಸ್ತಿಗೆ ಸಂಬಂಧಿದ ಪಹಣಿ ಪತ್ರಿಕೆಗಳಲ್ಲಿ ನಮೂದು ಇರುತ್ತದೆ. ನಿಡಿ-7 ಪಹಣಿ ಪತ್ರಿಕೆಯಲ್ಲಿ ವಿಭಾಗವಾದ ಬಾಬ್ತು ನಮೂದು ಇರುವುದಿಲ್ಲ. ದಾವಾ-2 ನೇ ಆಸ್ತಿ ವಿಭಾಗದಲ್ಲಿ 5 ನೇ ಪ್ರತಿವಾದಿಗೆ ಬಂದಿರುವಂತೆ ಪಹಣಿ ಪತ್ರಿಕೆಯಲ್ಲಿ ನಮೂದು ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಡಿ-32 ದಾಖಲೆಯಲ್ಲಿ ವಿಭಾಗದ ಬಾಬ್ತು ನಮೂದು ಇರುತ್ತದೆ. ನಿಡಿ-32 ದಾಖಲೆಯನ್ನು ನಾನು 6 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ನಿಡಿ-32 ದಾಖಲೆಗೆ ಸಂಬಂಧಿಸಿದ ಮನೆ ನನ್ನ ಹೆಸರಿನಲ್ಲಿ ಇರುತ್ತದೆ. ದಾವಾ-4 ನೇ ಆಸ್ತಿಯನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನನ್ನ ಹೆಂಡತಿ 7 ನೇ ಪ್ರತಿವಾದಿ ಹೆಸರಿಗೆ 6 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದ ಕ್ರಯ ಪತ್ರ ನೋಂದಣಿ ಆಗಿರುತ್ತದೆ. ಸದರಿ ಮನೆ ನಿಡಿ-32 ರಲ್ಲಿ ತಿಳಿಸಿರುವ ಆಸ್ತಿಯಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ಆಸ್ತಿಯು ಮಾರಾಟ ಮಾಡುವ ಸಮಯದಲ್ಲಿ ನಿವೇಶನ ಆಗಿತ್ತು ಎಂದು ನುಡಿಯುತ್ತಾರೆ. ದಾವಾ-4 ನೇ ಆಸ್ತಿ ಮೂಲತಃ ನನ್ನ ತಂದೆಯವರಿಗೆ ಸೇರಿತ್ತು. ಸದರಿಯವರಿಗೆ ದಾವಾ-4 ನೇ ಆಸ್ತಿ ಹೇಗೆ ಬಂದಿರುತ್ತದೆ

ಎನ್ನುವುದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ದಾವಾ-1, 2 ಮತ್ತು 4 ನೇ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಯಾದ ಕಾರಣ ಹೆಣ್ಣು ಮಕ್ಕಳಿಗೆ ಸಮಾನ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರಿಗೆ ಸದರಿ ಆಸ್ತಿಗಳಲ್ಲಿ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** 3(ಎ) ರಿಂದ (ಡಿ) ಮತ್ತು 6 ನೇ ಪ್ರತಿವಾದಿ ಪರ ಶ್ರೀ ಸಿ.ಎಂ.ಜೆ ವಕೀಲರಿಂದಃ

ನಾನು ಅಂದಾಜು 1976 ರಲ್ಲಿ ನನ್ನ ಪದವಿಯನ್ನು ಮುಗಿಸಿರುತ್ತೇನೆ. ಸದರಿಯವರು ನಾನು ವಿಧ್ಯಾಭ್ಯಾಸ ಪೂರ್ಣಗೊಳಿಸುವರೆಗೂ ಆರೋಗ್ಯವಾಗಿದ್ದರು ಎಂದರೆ ಸರಿ. ಸದರಿಯವರು ತಮ್ಮ ಜೀವಿತಾವಧಿಯಲ್ಲಿ ನನ್ನ ಸಹೋದರಿಯರ ಮದುವೆ ಕಾರ್ಯವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮಾಡಿರುತ್ತೇನೆ ಹಾಗೂ ಸದರಿಯವರ ಮಕ್ಕಳ ಮದುವೆಯನ್ನು ಸಹ ನಾನೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮದುವೆ ಯಾವಾಗ ಮಾಡಿರುತ್ತೇನೆ ಎನ್ನುವುದು ನನಗೆ ನೆನಪಿರುವುದಿಲ್ಲ. 1966 ರಲ್ಲಿ 2 ನೇ ಪ್ರತಿವಾದಿಯ ಮದುವೆಯಾಗಿರುತ್ತದೆ ಎನ್ನುವುದು ನನಗೆ ನೆನಪಿರುವುದಿಲ್ಲ. 3 ನೇ ಪ್ರತಿವಾದಿಯ ಮದುವೆ 1972 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ 4 ನೇ ಪ್ರತಿವಾದಿ ಮತ್ತು ವಾದಿಯ ಮದುವೆ 1975 ಮತ್ತು 1977 ರಲ್ಲಿ ಕ್ರಮವಾಗಿ ಆಗಿರುತ್ತದೆ ಎಂದರೆ ನನಗೆ ನೆನಪಿರುವುದಿಲ್ಲ. 1975 ರಿಂದ ಮೊದಲು ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಗುಮಾಸ್ತನಾಗಿ ಕೆಲಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳು ನನ್ನ ತಂದೆಗೆ ಸಂಬಂಧಿಸಿದ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಸಂಬಂದಿಸಿದ ಆಸ್ತಿಗಳು ಸಹ ಆಗಿರುತ್ತವೆ ಎಂದು ನುಡಿಯುತ್ತಾರೆ. 1996 ರಲ್ಲಿ

ವಿಭಾಗವಾಗಿರುತ್ತದೆ ಎಂದು ಹಾಜರುಪಡಿಸಿದ ದಾಖಲೆ ನಾನು ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ವಿಭಾಗದ ಪೂರ್ವದಲ್ಲಿ ದಾವಾ ಆಸ್ತಿಗಳ ವಿಭಾಗದ ಬಗ್ಗೆ ಚರ್ಚೆ ಮಾಡಿರುತ್ತೇವೆ. ದಾವಾ-1 ನೇ ಆಸ್ತಿಯು ನನಗೆ ವಿಭಾಗದಲ್ಲಿ ಬಂದ ಆಸ್ತಿ ಎಂದು ನಾನು ನುಡಿದಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 6 ನೇ ಪ್ರತಿವಾದಿಗೆ ಭಾಗ ಇರುತ್ತದೆ ಎಂದು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಲ್ಲಿ ಕಾಲುವೆ ಪಕ್ಕದಲ್ಲಿ 100 ತೆಂಗಿನ ಮರದ ವಿಸ್ತೀರ್ಣದ ಪ್ರದೇಶ 6 ನೇ ಪ್ರತಿವಾದಿಗೆ ಸೇರತಕ್ಕದ್ದು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ವಿಭಾಗ ಪತ್ರದಲ್ಲಿ ಬರೆದ ಅಂಶಗಳು ಸತ್ಯವಾಗಿರುತ್ತವೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದಂತೆ ಸದರಿ ಆಸ್ತಿಯನ್ನು 6 ನೇ ಪ್ರತಿವಾದಿಗೆ ಕೊಡದೇ ಅದನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ-1 ನೇ ಆಸ್ತಿಯ ಪಹಣಿ ಪತ್ರಿಕೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ವಿಭಾಗ ಪತ್ರದಂತೆ 6 ನೇ ಪ್ರತಿವಾದಿಯ ಹೆಸರಿಗೆ ದಾವಾ-1 ನೇ ಆಸ್ತಿಯ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ-1 ನೇ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ-1 ನೇ ಆಸ್ತಿಯ ಖಾತೆಯನ್ನು ಮಂಜೂರಾತಿ ಪತ್ರದ ಆಧಾರದ ಮೇರೆಗೆ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ನನ್ನ ಹೆಸರಿಗೆ ಆದ ಮಂಜೂರಾತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ-1 ನೇ ಆಸ್ತಿಯ ಖಾತೆಯನ್ನು ವಿಭಾಗ ಪತ್ರದ ಆಧಾರದ ಮೇರೆಗೆ ಮಾಡಿಕೊಂಡಿರುತ್ತೇನೆ.

ನಿಡಿ-4 ಮುಟೇಷನ ಆದೇಶದಲ್ಲಿ ದಾವಾ-1 ನೇ ಆಸ್ತಿಯ ಖಾತೆ ವಿಭಾಗದಂತೆ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಬರವಣಿಗೆ ಇರುವುದಿಲ್ಲ, ಆದರೆ ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು 6 ನೇ ಪ್ರತಿವಾದಿಗೆ ಹೆದರಿಸಿ ವಿಭಾಗ ಪತ್ರಕ್ಕೆ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ಸಹೋದರಿ ಎಂದರೆ ಸರಿ. ಸದರಿಯವರಿಗೆ ಸಹ ನನ್ನ ತಂದೆಯ ಆಸ್ತಿಗಳಲ್ಲಿ ಸಮಾನದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. 3 ಮತ್ತು 6 ನೇ ಪ್ರತಿವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**